ಕರ್ನಾಟಕ ಸರ್ಕಾರ
(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ:Comp /121/2020-21

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರಕಛೇರಿ,
8ನೇ ಮಹಡಿ, ಕಂದಾಯಭವನ,
ಕೆಂಪೇಗೌಡರಸ್ತೆ, ಬೆಂಗಳೂರು –09,
ದಿನಾಂಕ: 10 –12–2021.

## ಜ್ಞಾಪನ

**ವಿಷಯ:** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಡಿಸಿಸಿ ಬ್ಯಾಂಕುಗಳ ಶಾಖೆಗಳಿಂದ Declaration/Form-3 ಯನ್ನು ಭೌತಿಕವಾಗಿ ಸಲ್ಲಿಸಲು ದಿನಾಂಕ:31–12–2021ರವರೆಗೆ ಕಾಲಾವಕಾಶ ನೀಡುವ ಹಾಗೂ Mortagage (ಅಡಮಾನ) ಮಾಡುವಾಗಲು ಸಹ "FRUITS" ತಂತ್ರಾಂಶದಿಂದ ಬರುವ Data (ದತ್ತಾಂಶ)ವನ್ನು ಕಡ್ಡಾಯವಾಗಿ ಬಳಸಿ ನೋಂದಣಿ ಮಾಡುವ ಕುರಿತು.

**ಉಲ್ಲೇಖ:** 1. ಸಹಕಾರ ಸಂಘಗಳ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಸಿಎಬಿ–1/18/2021–22, ದಿನಾಂಕ:30–10–2021.
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:08–11–2021.
3. ಸರ್ಕಾರದ ಪತ್ರ ಸಂಖ್ಯೆ: ಕಂಇ/83/ಎಂಎನ್‌ಎಂಯು/2021, ದಿನಾಂಕ:15–11–2021.
4. ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ: ಕಂಇ/83/ಎಂಎನ್‌ಎಂಯು/2021, ದಿನಾಂಕ: 23–06–2021.
5. ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ: ಕಂಇ/83/ಎಂಎನ್‌ಎಂಯು/2021, ದಿನಾಂಕ: 09–12–2021.

******

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರು ಕೋರಿರುವಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಡಿಸಿಸಿ ಬ್ಯಾಂಕುಗಳ ಶಾಖೆಗಳಿಂದ Declaration/Form-3 ಯನ್ನು ಭೌತಿಕವಾಗಿ ಸಲ್ಲಿಸಲು ದಿನಾಂಕ: 31–12–2021ರವರೆಗೆ ಕಾಲಾವಕಾಶ ನೀಡುವಂತೆ ಉಲ್ಲೇಖ(2)ರ ಪತ್ರದನ್ವಯ ಸರ್ಕಾರವನ್ನು ಕೋರಲಾಗಿರುತ್ತದೆ. ಅದರಂತೆ ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಡಿಸಿಸಿ ಬ್ಯಾಂಕುಗಳ ಶಾಖೆಗಳಿಂದ Declaration/Form-3 ಯನ್ನು ಭೌತಿಕವಾಗಿ ಸಲ್ಲಿಸಲು ಕೊನೆಯ ಅವಕಾಶವಾಗಿ ಕಾಲಮಿತಿಯನ್ನು ದಿನಾಂಕ:31–12–2021 ರವರೆಗೆ ಮಾತ್ರ ವಿಸ್ತರಿಸಲು ಅನುಮತಿ ನೀಡಲಾಗಿರುತ್ತದೆ.

ಮುಂದುವರೆದು, ಉಲ್ಲೇಖ(4)ರ ಸರ್ಕಾರದ ಅಧಿಸೂಚನೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದಲ್ಲಿ ರೈತರು ಘೋಷಣೆ ಪತ್ರಗಳನ್ನು ಸಲ್ಲಿಸುವಾಗ ಬ್ಯಾಂಕಿನಿಂದ

ನಮೂನೆ-3ನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಭೌತಿಕವಾಗಿ ಸಲ್ಲಿಸುತ್ತಿದ್ದುದ್ದನ್ನು ಸರಳೀಕರಣಗೊಳಿಸಲು ಇ-ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿರುವ "FRUITS" ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು ಸಂಯೋಜನೆಗೊಳಿಸಲು ಆದೇಶಿಸಿರುವ ರೀತಿಯಲ್ಲಿಯೇ Mortagage (ಅಡಮಾನ) ಮಾಡುವಾಗಲು ಸಹ "FRUITS" ತಂತ್ರಾಂಶದಿಂದ ಬರುವ Data (ದತ್ತಾಂಶ)ವನ್ನು ಕಡ್ಡಾಯವಾಗಿ ಬಳಸಿ ನೋಂದಣಿ ಮಾಡುವಂತೆ ಉಲ್ಲೇಖ(5) ರ ಸರ್ಕಾರದ ಅಧಿಸೂಚನೆಯಲ್ಲಿ ಆದೇಶಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ತಿಳಿಸುತ್ತಾ, ಅದರಂತೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

10.12.21

**ನೋಂದಣಿ ಮಹಾಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಇವರಿಗೆ:**
ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳು ಹಾಗೂ ಉಪನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು- 560 001 ರವರಿಗೆ ಮಾಹಿತಿಗಾಗಿ.

2. ಸಹಕಾರ ಇಲಾಖೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560052 ರವರಿಗೆ ಮಾಹಿತಿಗಾಗಿ.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಕೊಠಡಿ ಸಂಖ್ಯೆ:106, 1ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 ರವರಿಗೆ ಮಾಹಿತಿಗಾಗಿ.